08532-220157 (ಕಛೇರಿ) 08532-220440 (ವಿಸ್ತರಣೆ140)
ಮಿಂಚಂಚೆ: registrar@uasraichur.edu.in ಜಾಲತಾಣ: uasraichur.karnataka.gov.in

# ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರು

**[ICAR, NAAC accredited and UGC u/s 12(B) & 2(f) approved]**

ಡಾ|| ಎಮ್. ವೀರನಗೌಡ
ಕುಲಸಚಿವರು

ಕುಲಸಚಿವರ ಕಾರ್ಯಾಲಯ
ಲಿಂಗಸೂಗೂರು ರಸ್ತೆ, ರಾಯಚೂರು-584 104

ಸಂ:ಕುಸ/ಕೃವಿವಿರಾ/ನೇವಿ/ಅಂತಿಮ ಅರ್ಹತಾ ಪಟ್ಟಿ/1090 /2023-24 ದಿನಾಂಕ: 27.10.2023

## ಅಧಿಸೂಚನೆ

ವಿಷಯ: 2022 ನೇ ಸಾಲಿನ ಕಿರಿಯ ಅಭಿಯಂತರರು (ಕೃಷಿ) ವೃಂದದಿಂದ ಸಹಾಯಕ ಅಭಿಯಂತರರು (ಕೃಷಿ) ವೃಂದದ ಮುಂಬಡ್ತಿಗೆ ಅಂತಿಮ ಅರ್ಹತಾ ಪಟ್ಟಿಯನ್ನು ಪ್ರಕಟಪಡಿಸುವ ಕುರಿತು.

ಉಲ್ಲೇಖ:
1. ಕೃವಿವಿ, ರಾಯಚೂರಿನ 2022 ನೇ ಸಾಲಿನಲ್ಲಿ ಅಧಿಸೂಚಿಸಲಾದ ತಾತ್ಕಾಲಿಕ ಅರ್ಹತಾ ಪಟ್ಟಿ ಸಂ. ಕುಸ/ಕೃವಿವಿರಾ/ನೇವಿ/ಅರ್ಹತಾ ಪಟ್ಟಿ/1642/2022-23 ದಿ: 26.07.2022
2. ಸರ್ಕಾರದ ಸ್ಪಷ್ಟೀಕರಣ ನೀಡಿದ ಪತ್ರ ದಿನಾಂಕ: 17-08-2023.
3. ಈ ಕಚೇರಿ ಆದೇಶ ಸಂ: ಕುಸ/ಕೃವಿವಿರಾ/ಪರಿಶೀಲನಾ ಸಮಿತಿ/463/2023-24 ದಿನಾಂಕ: 24.08.2023
4. ಸಂಶೋಧನಾ ನಿರ್ದೇಶಕರ ಅಧ್ಯಕ್ಷತೆಯಲ್ಲಿ ರಚಿಸಲಾದ ಸಭೆಯ ನಡಾವಳಿ
5. ಈ ಕಚೇರಿ ಪರಿಷ್ಕೃತ ಜೇಷ್ಠತಾ ಪಟ್ಟಿ ಅಧಿಸೂಚನೆ ಸಂ: ಕುಸ/ಕೃವಿವಿರಾ/1084/2023-24 ದಿನಾಂಕ: 26.10.2023
6. ಮಾನ್ಯ ಕುಲಪತಿಗಳು ಕೃವಿವಿ, ರಾಯಚೂರು ಇವರ ಅನುಮೋದನೆ

******

ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ 2022 ರ ಸಾಲಿನ ಶಿಕ್ಷಕೇತರ ಸಿಬ್ಬಂದಿಯವರ ಮುಂಬಡ್ತಿಯ ತಾತ್ಕಾಲಿಕಾ ಅರ್ಹತಾ ಪಟ್ಟಿಯನ್ನು ದಿನಾಂಕ 26.07.2023 ರಂದು ಉಲ್ಲೇಖ (1) ರನ್ವಯ 15 ದಿನಗಳ ಕಾಲಾವಕಾಶದೊಂದಿಗೆ ಪ್ರಕಟಿಸಲಾಗಿರುತ್ತದೆ (ತಾತ್ಕಾಲಿಕ ಅರ್ಹತಾ ಪಟ್ಟಿಯಿಂದಾಗಿ ಯಾವುದೇ ನೌಕರರು ಬಾಧಿತರಾಗಿದ್ದಲ್ಲಿ, ಮಾನ್ಯ ಕುಲಪತಿಗಳು, ಕೃವಿವಿ ರಾಯಚೂರು ಇವರಿಗೆ ಅಪೀಲನ್ನು ಸಲ್ಲಿಸಲು ತಿಳಿಸಿದ್ದು). ಸದರಿ ಪ್ರಕಟಿತ ತಾತ್ಕಾಲಿಕಾ ಅರ್ಹತಾ ಪಟ್ಟಿಯಲ್ಲಿ ಕಿರಿಯ ಅಭಿಯಂತರರು (ಕೃಷಿ) ವೃಂದದಿಂದ ಸಹಾಯಕ ಅಭಿಯಂತರರು (ಕೃಷಿ) ಹುದ್ದೆಯಲ್ಲಿ ನೇರ ನೇಮಕಾತಿ ಹಾಗೂ ಬ್ಯಾಕ್‌ಲಾಗ್ ಅಡಿ ನೇಮಕಗೊಂಡ ಶಿಕ್ಷಕೇತರ ಸಿಬ್ಬಂದಿಯವರ ಜೇಷ್ಠತೆಯ ಕುರಿತು ಆಕ್ಷೇಪಣೆಯು ವ್ಯಕ್ತವಾಗಿರುತ್ತದೆ.

ಸದರಿ ಆಕ್ಷೇಪಣೆಯನ್ನುದ್ದೇಶಿಸಿ ಕುಲಪತಿಗಳು ಕೃವಿವಿ, ರಾಯಚೂರು ಇವರು ಸದರಿ ವಿಷಯವಾಗಿ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ ಇವರಿಗೆ ಸ್ಪಷೀಕರಣವನ್ನು ಕೋರಲು ಸೂಚಿಸಿದ್ದು, ಅದರನ್ವಯ ದಿನಾಂಕ 07.10.2022 ಹಾಗೂ 01.02.2023 ರಂದು ಪ್ರಧಾನ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ ಇವರಿಗೆ ಸ್ಪಷೀಕರಣವನ್ನು ಕೋರಲಾಗಿರುತ್ತದೆ.

ಮುಂದುವರೆದು, ಉಲ್ಲೇಖ (2) ರನ್ವಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ಇವರು ಸ್ಪಷ್ಟೀಕರಣವನ್ನು ನೀಡಿದ್ದು, ಸದರಿ ಸರ್ಕಾರದ ಸ್ಪಷ್ಟೀಕರಣವನ್ನುದ್ದೇಶಿಸಿ ಶ್ರೀ. ರಂಗನಾಥ ಇವರು ತಮ್ಮ ಮನವಿ / ಆಕ್ಷೇಪಣೆಯನ್ನು ಈ ಕಛೇರಿಗೆ ದಿನಾಂಕ 22-08.2023 ಮತ್ತು 29.08.2023 ರಂದು ಸಲ್ಲಿಸಿದ್ದು ಸದರಿ ಮನವಿಗಳನ್ನು ಹಾಗೂ ಸರ್ಕಾರದ ಸ್ಪಷ್ಟೀಕರಣವನ್ನು ಕೂಲಂಕಷವಾಗಿ ಪರಿಶೀಲಿಸಿ ಸೂಕ್ತ ನಿರ್ಧಾರವನ್ನು ಕೈಗೊಳ್ಳಲು ಸಂಶೋಧನಾ ನಿರ್ದೇಶಕರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ಉಲ್ಲೇಖ (3) ರನ್ವಯ ರಚಿಸಲಾಗಿರುತ್ತದೆ. ಸದರಿ ಸಮಿತಿಯು 2017 ರಿಂದ 2022 ರವರೆಗಿನ ಸ್ಥಳೀಯ ವೃಂದದ ಜೇಷ್ಠತಾ ಪಟ್ಟಿಯನ್ನು ಸರಿದೂಗಿಸುವಂತೆ ಉಲ್ಲೇಖ (4) ರನ್ವಯ ವರದಿಯನ್ನು ನೀಡಿದ್ದು, ಅದರಂತೆ ಜೇಷ್ಠತಾ ಪಟ್ಟಿಯಲ್ಲಿ ಕಿರಿಯ ಅಭಿಯಂತರರು (ಕೃಷಿ) ಹುದ್ದೆಯಲ್ಲಿ

ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಯವರ ಪರಿಷ್ಕೃತ ಅಂತಿಮಗೊಳಿಸಿದ ಜೇಷ್ಠತಾ ಪಟ್ಟಿಯನ್ನು ಉಲ್ಲೇಖ (5) ರನ್ವಯ ತಿದ್ದುಪಡಿ ಮಾಡಿ ಪ್ರಕಟಿಸಿರುತ್ತದೆ.

ಈ ಹಿನ್ನೆಲೆಯಲ್ಲಿ, ಮಾನ್ಯ ಕುಲಪತಿಗಳು ಕೃವಿವಿ, ರಾಯಚೂರು ಇವರ ಅನುಮೋದನೆಯನ್ವಯ 2022 ರ ಸ್ಥಳೀಯ ವೃಂದದ ಕಿರಿಯ ಅಭಿಯಂತರರು (ಕೃಷಿ) ವೃಂದದಿಂದ ಸಹಾಯಕ ಅಭಿಯಂತರರು (ಕೃಷಿ) ಹುದ್ದೆಯ ಮುಂಬಡ್ತಿಗಾಗಿ ಪರಿಷ್ಕೃತ ಜೇಷ್ಠತಾ ಪಟ್ಟಿಯನುಸಾರ **ಅಂತಿಮ ಅರ್ಹತಾ ಪಟ್ಟಿಯನ್ನು ಅನುಬಂಧದಲ್ಲಿ** ತಿಳಿಸಿದಂತೆ ಈ ಮೂಲಕ ಪ್ರಕಟಿಸಲಾಗಿದೆ.

ಕುಲಸಚಿವರು
ಕೃವಿವಿ, ರಾಯಚೂರು.

ಕುಲಸಚಿವರು
ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ
ರಾಯಚೂರು-584 104

**ಇವರಿಗೆ,**

- ಕೃವಿವಿ ರಾಯಚೂರಿನ ಎಲ್ಲಾ ಅಧಿಕಾರಿಗಳಿಗೆ.
- ಎಲ್ಲಾ ಮುಖ್ಯಸ್ಥರುಗಳು, ಕೃಷಿ ಸಂಶೋಧನಾ ಕೇಂದ್ರಗಳು / ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರಗಳು / ಕೃಷಿ ವಿಜ್ಞಾನ ಕೇಂದ್ರಗಳು, ಕೃವಿವಿ ರಾಯಚೂರು ಇವರುಗಳಿಗೆ ಮಾಹಿತಿಗಾಗಿ.

ಅನುಬಂಧ

(ಕೃವಿವಿ ಅಧಿಸೂಚನೆ ಸಂ:ಕುಸ/ಕೃವಿವಿರಾ/ನೇವಿ/ಅಂತಿಮ ಅರ್ಹತಾ ಪಟ್ಟಿ/1090/2023–'24 ದಿನಾಂಕ: 27.10.2023)

**ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನ ಶಿಕ್ಷಕೇತರ ಸಿಬ್ಬಂದಿಯವರ (ಕಿರಿಯ ಅಭಿಯಂತರರು (ಕೃಷಿ) ಹುದ್ದೆಯಿಂದ ಸಹಾಯಕ ಅಭಿಯಂತರರು (ಕೃಷಿ) ಹುದ್ದೆಯ) ಬಡ್ತಿಗಾಗಿ 2022ನೇ ಸಾಲಿನ ಅಂತಿಮ ಅರ್ಹತಾ ಪಟ್ಟಿ.**

1. ಕಿರಿಯ ಅಭಿಯಂತರರು (ಕೃಷಿ) ಹುದ್ದೆಯಿಂದ ಸಹಾಯಕ ಅಭಿಯಂತರರು (ಕೃಷಿ) ಹುದ್ದೆಗೆ ಮುಂಬಡ್ತಿ:

| ಕ್ರಮ ಸಂ. | ಹೆಸರು ಮತ್ತು ವಿದ್ಯಾರ್ಹತೆ | ಸ್ಥಳ | ಹುಟ್ಟಿದ ದಿನಾಂಕ | ಪ್ರಸಕ್ತ ಹುದ್ದೆಗೆ ಸೇರಿದ ದಿನಾಂಕ |
|---|---|---|---|---|
| | **ಸ್ಥಳೀಯ** | | | |
| 1 | **ಶ್ರೀ. ಪೃಥ್ವಿರಾಜ** (ಎಸ್.ಸಿ.)<br>ಬಿ.ಟೆಕ್. (ಕೃತಾಂ.), ಅಕೌಂಟ್ಸ ಹೈಯರ್, ಜನರಲ್ ಲಾ I & II., ಪಿಡಬ್ಲ್ಯೂಡಿ ಹೈಯರ್ I & II.. | AICRP, Scheme ಕೃತಾಂ.ಮ., ರಾಯಚೂರು | 10.07.91 | 08.11.17 |

ಕುಲಸಚಿವರು
ಕೃವಿವಿ, ರಾಯಚೂರು

ಕುಲಸಚಿವರು
ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ
ರಾಯಚೂರು-584 104